ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1146/2019

ಚಾಸಾಃ( 07 ) ಪ್ರಾಸಾ ( 08 )

ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಧರ್ಮರಾಜ ಪವಾರ್ |
| ತಂದೆ ಹೆಸರು | ವೈ. ಯಮನಾಥ |
| ವಯಸ್ಸು | 63 ವರ್ಷ, |
| ಉದ್ಯೋಗ | ನಿವೃತ್ತ ಆರ್ ಟಿ ಓ |
| ವಾಸಸ್ಥಳ | ಬೆಳಗಾವಿ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನಾನು ಕೊಪ್ಪಳ ಆರ್ ಟಿ ಓ ಕಚೇರಿಯಲ್ಲಿ ಆಗಸ್ಟ್ 2016 ರಿಂದ ಜೂನ್ 2019 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಕೊಪ್ಪಳ ಗ್ರಾಮೀಣಾ ಠಾಣೆಯ ವಿನಂತಿ ಮೇರೆಗೆ ದಿಃ 15-05-2019 ರಂದು ವಾಹನ ನಂ. ಕೆಏ 37 ಜಿ 0348 ನೇದ್ದನ್ನು ಪರಿಶೀಲಿಸಿ ನನ್ನ ವರದಿಯನ್ನು ನೀಡಿರುತ್ತೇನ. ಸದರಿ ವಾಹನಕ್ಕೆ ಕೆಳಗಿನ ಜಾಕಂ ಆಗಿರುವುದು ಕಂಡು ಬಂದಿರುತ್ತವೆ.

ಸದರಿ ವಾಹನಕ್ಕೆ ಮುಂದಿನ ಬಂಪರ್ ಜಕಾಂಗೊಂಡಿತ್ತು, ರೇಡಿಯೊಟರ್ ಮತ್ತು ಬಾಂಡರೇಟರ್, ಎರಡು ಹೆಡ್ ಲೈಟಿ ಮತ್ತು ಇಂಡಿಕೇಟರ್ ಗಳು, ಮುಂದಿನ ಎಡಗಡೆ ಚಕ್ರದ ಮಡ್ ಗಾರ್ಡ, ಮುಂದಿನ ಎಡಭಾಗದ ಬಾಗಿಲು, ವಿಂಡಿಸ್ ಸ್ಕ್ರೀನ್ ಗ್ಯಾಸ್ ಇವುಗಳು ಜಕಾಂಗೊಂಡಿದ್ದವು. ನನ್ನ ಅಬಿಪ್ರಾಯದ ಪ್ರಕಾರ ಸದರಿ ವಾಹನದ ಬ್ರೆಕ್ ಸಿಸ್ಟೀಮ ಪರೀಕ್ಷೆ ಮಾಡಲಾಗಿ ವಾಹನ ಸುಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ಸದರಿ ಅಪಘಾತ ವಾಹನದ ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಮತ್ತು ವಾಹನಕ್ಕೆ ಯಾವುದೇ ಜಾಕಂಗಳು ಅಪಘಾತದಿಂದ ಆಗಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ನಾನು ವರದಿಯನ್ನು ನೀಡಿರುತ್ತೇನೆ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಪಾಟೀ ಸವಾಲು ಮುಂದೂಡಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.